

# ಯಾರೂ ಇಲ್ಲದ ಲೋಕದಲ್ಲಿ...

ಮನುಷ್ಯ ತನ್ನ ಸ್ವಾರ್ಥಕೇಂದ್ರಿತ ನಡೆಯಿಂದ ತಂದುಕೊಳ್ಳುತ್ತಿರುವ ವಿನಾಶದ ಪರಾಕಾಷ್ಠೆ ಹೇಗಿರಬಹುದು ಎಂಬುದರ ಸಣ್ಣ ಝಲಕ್ ಅನ್ನು ಈ ಕಿರುಚಿತ್ರ ನೀಡುತ್ತದೆ.

■ ಗೌರಿ

ಮನುಷ್ಯ ಸಂಗಜೀವಿ. ಸಂಗಜೀವನ ಅನ್ನುವುದು ಅವನ ವಿಶೇಷ ಗುಣವಷ್ಟೇ ಅಲ್ಲ, ಅನಿವಾರ್ಯವೂ ಹೌದು. ಕಚ್ಚಾಡುತ್ತಲೋ, ಹೊಡೆದಾಡಿಕೊಳ್ಳುತ್ತಲೋ, ಖುಷಿಯನ್ನು ಹಂಚಿಕೊಳ್ಳುತ್ತಲೋ ಅವರು ಗುಂಪಾಗಿಯೇ ಬದುಕು ಸವೆಸುವುದು. ಒಂದೊಮ್ಮೆ ಈ ಸಂಗಜೀವನದ ಅಂಶವೇ ಅವನ ಬದುಕಿನಿಂದ ತೆಗೆದರೆ ಏನಾಗುತ್ತದೆ? ಅವನ ಬದುಕು, ದಿನಚರಿ, ಆಲೋಚನೆ ಕ್ರಮ ಎಲ್ಲವೂ ಹೇಗಿರಬಹುದು?

ಹೇಗಿರಬಹುದು ಎಂಬುದರ ಒಂದು ಸಣ್ಣ ಝಲಕ್ ಕಳೆದ ಎರಡು ವರ್ಷಗಳಲ್ಲಿ ನಾವೆಲ್ಲರೂ ಕಂಡಿದ್ದೇವೆ. ಕೊರೊನಾ ಎಂಬ ವೈರಸ್‌ನಿಂದ ಮನೆಯೊಳಗೆ ಸಿಕ್ಕಿಹಾಕಿಕೊಂಡು ಹೊರಗೇ ಬರಲಾರದ ಪರಿಸ್ಥಿತಿಯಲ್ಲಿ ಸಂಗಜೀವನದ ಅನಿವಾರ್ಯತೆ ಎಲ್ಲರಿಗೂ ಗೊತ್ತಾಗಿದೆ.

ಇದೇ ಪರಿಕಲ್ಪನೆಯನ್ನು ಇನ್ನೊಂದಿಷ್ಟು ಮುಂದುವರಿಸಿದಂತಿರುವ ಕಿರುಚಿತ್ರ 'ಡೇಯ್ಸ್ ಲೆಫ್ಟ್ ಬಿಹೈಂಡ್'. ಜೀಶನ್ ಅಲಿ ಡೋಸ್ಸಾ ನಿರ್ದೇಶನದ ಈ ಕಿರುಚಿತ್ರ ಏಕಾಕಿತನದ ಭಯಾನಕತೆಯನ್ನೂ, ಅದರ ಬರ್ಬರ ಪರಿಣಾಮಗಳನ್ನು ತೋರಿಸುವಂತಿದೆ.

ಭಯಾನಕ ವೈರಸ್ ಒಂದರ ದಾಳಿಗೆ ಸಿಕ್ಕಿ ಇಡೀ ಜಗತ್ತೇ ಛಿದ್ರಗೊಂಡಿದೆ. ಬಹುತೇಕರು ಸತ್ತುಹೋಗಿ, ಭೂಮಿಯ ಮೇಲೆ ಕೆಲವೇ ಕೆಲವರು ಉಳಿದುಕೊಂಡಿದ್ದಾರೆ. ಅವರಲ್ಲಿ ಅವನೂ ಒಬ್ಬ.. ಆ ಮನೆಯೊಳಗೆ ಎಷ್ಟೋ ಕಾಲದಿಂದೆಂಬಂತೆ ಅವನು ಮಲಗಿದ್ದಾನೆ. ಎಚ್ಚರಾದರೆ ಕುಡಿಯಲು ಗುಟುಕು ನೀರಿಲ್ಲ. ಅಡುಗೆ ಮನೆ, ಹೊರಗೆ ಪಾತ್ರ ತೊಳೆಯುವ ಜಾಗ ಎಲ್ಲಿ ನೋಡಿದರೂ ನೀರಿನ ಹನಿಯೂ ಸಿಗುವುದಿಲ್ಲ. ಈ ಜಗತ್ತಿನಲ್ಲಿ ನಿರಾಶನಾಗಿ ಹಾಗೆಯೇ ಬಂದು ಮಲಗಿದರೆ ಹೊರಗೆ ಕಾರೊಂದು ಡಿಕ್ಕಿ ಹೊಡೆದ ಸದ್ದಾಗುತ್ತದೆ. ಹೋಗಿ ನೋಡಿದರೆ ಒಂದು ಕಾರು ಕರೆಂಟ್ ಕಂಬಕ್ಕೆ ಡಿಕ್ಕಿ ಹೊಡೆದು ನಿಂತಿದೆ. ಅದರ ಮುಂದಿನ ಸೀಟಿನ ಬಾಗಿಲು ತೆರೆದೇ ಇದೆ. ಅಲ್ಲಿ ಯಾರೂ ಇಲ್ಲ.

| | |
|---|---|
| ಹೆಸರು: | ಡೇಯ್ಸ್ ಲೆಫ್ಟ್ ಬಿಹೈಂಡ್ |
| ನಿರ್ದೇಶನ: | ಜೀಶನ್ ಅಲಿ ಡೋಸ್ಸಾ |
| ನಿರ್ಮಾಣ: | ಸೈಕ್ವಾ ಎ ಡೋಸ್ಸಾ |
| ಛಾಯಾಗ್ರಹಣ: | ಕ್ರಿಸ್ಟೋ ಜಾಯ್ |
| ಸಂಗೀತ: | ರಾಹುಲ್ ಮೆಹರೆ |
| ತಾರಾಗಣ: | ಆರ್ಯನ್ ದೇಶಪಾಂಡೆ, ಶ್ರೇಯಾ ಸಿಂಗ್ |

ಅಲ್ಲೇ ಅತ್ತಿತ್ತ ನೋಡುತ್ತ, ಕೈಯಲ್ಲಿ ಗನ್ ಹಿಡಿದು ನಿಂತವನಿಗೆ ಪಕ್ಕದಲ್ಲೇ ಏನೋ ಸದ್ದಾದಂತಾಗಿ ಪಟ್ಟನೆ ಗುಂಡು ಹೊಡೆದುಬಿಡುತ್ತಾನೆ. ಅಚಾನಕ್ಕಾಗಿ ಎಲ್ಲವೂ ನಡೆದುಹೋಗಿ ಅವನ ಗುಂಡಿಗೆ ಹುಡುಗಿಯೊಬ್ಬಳು ನೆಲಕ್ಕುರುಳುತ್ತಾಳೆ.

ಮುಂದಿನ ದೃಶ್ಯದಲ್ಲಿ ಅವರಿಬ್ಬರೇ ಮನೆಯೊಳಗಿದ್ದಾರೆ. ಆ ಹುಡುಗಿ ಏನೋ ತಿನ್ನುತ್ತಿದ್ದಾಳೆ. ಅವನ ಜೊತೆಗೆ ಮಾತಾಡುತ್ತಿದ್ದಾಳೆ. ಅವನು ಅವಳನ್ನು 'ಕ್ಷಮಿಸು, ಒಮ್ಮೆಲೇ ಗೊತ್ತಾಗದೇ ಅಚಾತುರ್ಯ ನಡೆದು ಹೋಯಿತು' ಎನ್ನುತ್ತಾನೆ!

ಈ ರೀತಿ ವಾಸ್ತವ, ಭ್ರಮೆ ಎರಡನ್ನೂ ಮಿಶ್ರ ಮಾಡಿದ ನಿರೂಪಣೆಯಲ್ಲಿ ಈ ಕಿರುಚಿತ್ರ ಸಾಗುತ್ತದೆ. ವೈರಸ್ ದಾಳಿಗೆ ಒಳಗಾದವರು, ಏಕಾಕಿತನದಿಂದ ಕಂಗೆಟ್ಟವರೆಲ್ಲ ಹುಚ್ಚರ ಹಾಗೆ ಮೈಗೆಲ್ಲ ಗಾಯ ಮಾಡಿಕೊಂಡು ಅಲೆಯುತ್ತಿದ್ದಾರೆ. ಯಾರಾದರೂ ಮನುಷ್ಯರು ಸಿಕ್ಕರೆ ಅವರನ್ನು ಛಿದ್ರಗೊಳಿಸುವಷ್ಟು ಉದ್ರಿಕ್ತರಾಗಿದ್ದಾರೆ. ಅದು ದೈಹಿಕ ರೋಗವೋ, ಮಾನಸಿಕ ರೋಗವೋ ಎಂದು ಗೊತ್ತಾಗದಂಥ ಪರಿಸ್ಥಿತಿ ಇದೆ.

ಅಂಥ ಜನರನ್ನೆಲ್ಲ ಕೊಂದುಹಾಕಿ ಹೊರಡುವ ನಾಯಕ ಕೊನೆಗೂ ತನ್ನನ್ನು ತಾನೇ ಕೊಂದುಕೊಳ್ಳುತ್ತಾನೆ!

ಸಮೂಹ ಜೀವನದಿಂದ ಮನುಷ್ಯ ವಿಮುಖನಾದಷ್ಟೂ ಸ್ವಾರ್ಥಿಯಾಗುತ್ತಾನೆ. ಪ್ರಕೃತಿಯ ಜೊತೆಗಿನ ಅವನ ಸಹಜ ಸಂಬಂಧ ಹದಗೆಡುತ್ತ ಬರುತ್ತದೆ. ವ್ಯಕ್ತಿಕೇಂದ್ರಿತವಾದ ಬದುಕು, ಆಲೋಚನೆ, ಸಮಾಜ ಎಲ್ಲವೂ ತನ್ನನ್ನು ತಾನೇ ವಿನಾಶದ ದಾಡೆಯತ್ತ ದೂಡುತ್ತಿರುತ್ತದೆ. ಈ ಕಥೆಯ ನಾಯಕ ಆಡುವ ಒಂದು ಮಾತು ಇಡೀ ಚಿತ್ರದ ಜೀವಾಳವನ್ನೇ ತೆರೆದಿಡುವಂತಿದೆ. 'ನಮಗೆ ಮುನ್ಸೂಚನೆಗಳು ಸಿಕ್ಕಿದ್ದವು; ಆದರೆ ನಾವು ಏನೂ ಮಾಡಲಿಲ್ಲ. ಏನೋ ಮಾಡುವ ಹೊತ್ತಿಗೆ ಕಾಲ ಮಿಂಚಿ ಹೋಗಿತ್ತು'. ಈಗಲೂ ನಮಗೆ ವಿನಾಶದ ಮುನ್ಸೂಚನೆಗಳು ಸಿಗುತ್ತಿವೆ. ಆದರೆ ನಾವು ಏನು ಮಾಡುತ್ತಿದ್ದೇವೆ? ಈ ಪ್ರಶ್ನೆಯನ್ನೇ ಪರೋಕ್ಷವಾಗಿ ಈ ಕಿರುಚಿತ್ರ ಕೇಳುತ್ತಿರುವ ಹಾಗಿದೆ.



ಈ ಕಿರುಚಿತ್ರ ವೀಕ್ಷಣೆಗೆ https://bit.ly/3oGeY11 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.